# ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)

**ಸಂಖ್ಯೆ: ಚುನಾವಣೆ/ವಿವ/42/2015-16**

ಪ್ರಾದೇಶಿಕ ಆಯುಕ್ತರ ಕಛೇರಿ,
2ನೇ ಮಹಡಿ , ಬಿ.ಎಂ.ಟಿ.ಸಿ ಕಟ್ಟಡ,
ಕೆ.ಹೆಚ್.ರಸ್ತೆ, ಶಾಂತಿನಗರ,
ಬೆಂಗಳೂರು, ದಿನಾಂಕ: 8-11-2016.

**ರವರಿಗೆ,**

ಸಹಕಾರ ಸಂಘಗಳ ಉಪನಿಬಂಧಕರು,
ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ,
ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ,
ದಾವಣಗೆರೆ, ಶಿವಮೊಗ್ಗ, ಮೈಸೂರು, ಮಂಡ್ಯ, ಹಾಸನ,
ಚಾಮರಾಜನಗರ, ಉಡುಪಿ, ಚಿಕ್ಕಮಗಳೂರು, ಕೊಡಗು,
ದಕ್ಷಿಣ ಕನ್ನಡ, ಬೆಳಗಾವಿ, ಧಾರವಾಡ, ಬಿಜಾಪುರ, ಬಾಗಲಕೋಟೆ,
ಉತ್ತರ ಕನ್ನಡ, ಹಾವೇರಿ, ಗದಗ, ಗುಲ್ಬರ್ಗಾ, ಬೀದರ್,
ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ಯಾದಗಿರಿ ಜಿಲ್ಲೆ.

08 NOV 2016
12146

**ಮಾನ್ಯರೆ,**

**ವಿಷಯ:** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಚುನಾವಣೆ ಸಂಬಂಧ ಸದಸ್ಯ ಸಹಕಾರಿಗಳಲ್ಲಿ ಡೆಲಿಗೇಟ್ಸ್ ಆಯ್ಕೆ ಕುರಿತು ನಡೆಸಲಾಗುವ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.

**ಉಲ್ಲೇಖ:**
1. ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರ ಆದೇಶ ಸಂಖ್ಯೆ: ಸಚುಪ್ರಾ/ ಚುಅನೇ/ಅಪೆಕ್ಸ್/06/2016 ದಿನಾಂಕ: 16-1-2016.
2. ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರ ಅಧಿಸೂಚನೆ ಸಂಖ್ಯೆ:ಸಚುಪ್ರಾ/ಆಡಳಿತ/ಚುನಾವಣೆ/07/2016 ದಿನಾಂಕ: 16-1-2016.
3. ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂಖ್ಯೆ: ಸಚುಪ್ರಾ/ಬೆಂ.ವಿ./ ಆಮಂಚು/ ಚುನಾವಣೆ/ 1426/2015/391 ದಿ: 18-2-2016.
4. ಈ ಕಛೇರಿಯ ಸಮಸಂಖ್ಯೆ ಅಧಿಕೃತ ಜ್ಞಾಪನ ದಿ:7-10-2016.
5. ಕಾರ್ಯದರ್ಶಿ, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂಖ್ಯೆ: ಸಚುಪ್ರಾ/ಬೆಂ.ವಿ./ಆಮಂ/1426/2015/1211 ದಿನಾಂಕ: 17-10-2016.
6. ಕಾರ್ಯದರ್ಶಿ, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂಖ್ಯೆ: ಸಚುಪ್ರಾ/ಬೆಂ.ವಿ./ಆಮಂ/1426/2015/1212 ದಿನಾಂಕ: 17-10-2016.
7. ಈ ಕಛೇರಿಯ ಸಮಸಂಖ್ಯೆ ಪತ್ರದ ದಿನಾಂಕ: 22-10-2016.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರುರವರ ಪತ್ರ ಸಂಖ್ಯೆ: ಸಂಸ/ ಆಡಳಿತ/ಚುನವಣೆ/35/2016-17/1624 ದಿ:5-11-2016.

*******

ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರರವರ ಉಲ್ಲೇಖ(1)ರ ಆದೇಶದಂತೆ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರುರವರನ್ನು ಅವರ ಕಾರ್ಯವ್ಯಾಪ್ತಿಯಲ್ಲಿ ಒಳಪಡುವ ಅಪೆಕ್ಸ್ ಸಹಕಾರ ಸಂಘಗಳ ಆಡಳಿತ ಮಂಡಳಿ ಹಾಗೂ ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂಧ ಜಿಲ್ಲಾ ಚುನಾವಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿರುತ್ತದೆ. ಹಾಗೂ ಉಲ್ಲೇಖ(2)ರ ಅಧಿಸೂಚನೆಯಲ್ಲಿ ಅಪೆಕ್ಸ್ ಸಹಕಾರ ಸಂಘಗಳ ಚುನಾವಣೆ ನಡೆಸುವ ಬಗ್ಗೆ ಕಾಲಾಕಾಲಕ್ಕೆ ಕೈಗೊಳ್ಳಬೇಕಾದ ಕ್ರಮಗಳ ವಿವರಿಸಲಾಗಿರುತ್ತದೆ ಹಾಗೂ ಚುನಾವಣೆಗೆ ದಿನಾಂಕಗಳನ್ನು ನಿಗದಿಪಡಿಸಲಾಗಿರುತ್ತದೆ. ಅದರಂತೆ ಅಪೆಕ್ಸ್ ಸಹಕಾರ ಸಂಘಗಳಿಗೆ ದಿನಾಂಕ: 28-9-2016 ಮತ್ತು 29-9-2016 ಈ ಎರಡು ದಿನಾಂಕಗಳಲ್ಲಿ ಸೂಕ್ತವೆನಿಸುವ ಯಾವುದೇ ದಿನಾಂಕದಲ್ಲಿ ಚುನಾವಣೆಯನ್ನು ನಿಗದಿಪಡಿಸತಕ್ಕದ್ದೆಂದು ತಿಳಿಸಲಾಗಿದೆ.

ಉಲ್ಲೇಖ(3)ರ ಪತ್ರದಲ್ಲಿ "ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕರಿಯು ರಾಜ್ಯ ಮಟ್ಟದ ಅಪೆಕ್ಸ್/ಫೆಡರಲ್ ಸಂಸ್ಥೆಯಾಗಿರುತ್ತದೆ. ಸಂಯುಕ್ತ ಸಹಕಾರಿಯ ಚುನಾವಣೆಯನ್ನು ಪ್ರಾಥಮಿಕ/ಮಾಧ್ಯಮಿಕ/ಒಕ್ಕೂಟ ಸಹಕಾರಿಗಳ ಪ್ರತಿನಿಧಿಗಳ ಮುಖಾಂತರ ನಡೆಸಬೇಕಾಗಿ ರುವುದರಿಂದ, ಮಾಧ್ಯಮಿಕ ಸಹಕಾರ ಸಂಘಗಳಿಗೆ/ ಸಹಕಾರಿಗಳಿಗೆ ಗೊತ್ತುಪಡಿಸಲಾದ ಚುನಾವಣಾ ದಿನಾಂಕಗಳಲ್ಲಿಯೇ ಫೆಡರಲ್ ಸಹಕಾರ ಸಂಘಗಳಿಗೆ/ ಒಕ್ಕೂಟ ಸಹಕಾರಿಗಳಿಗೆ ಚುನಾವಣೆಯನ್ನು ನಡೆಸಬಹುದಾಗಿರುತ್ತದೆ. ಅದೇ ರೀತಿಯಲ್ಲಿ ಫೆಡರಲ್ ಸಹಕಾರ ಸಂಘಗಳಿಗೆ/ ಸಹಕಾರಿಗಳಿಗೆ ಗೊತ್ತುಪಡಿಸಿರುವ ದಿನಾಂಕಗಳಲ್ಲಿ ಸೌಹಾರ್ದ ಸಂಯುಕ್ತ ಸಹಕಾರಿಯ ಚುನಾವಣೆಯನ್ನು ನಡೆಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು, ಫೆಡರಲ್ ಸಹಕಾರ ಸಂಘಗಳು/ ಒಕ್ಕೂಟ ಸಹಕಾರಿಗಳಿಗೆ ಗೊತ್ತುಪಡಿಸಲಾಗಿರುವ ಚುನಾವಣಾ ದಿನಾಂಕಗಳಲ್ಲಿ ಸಂಯುಕ್ತ ಸಹಕಾರಿಯ ಚುನಾವಣೆಯನ್ನು ನಡೆಸಲು ಅಗತ್ಯ ಕ್ರಮ ಕೈಗೊಳ್ಳಲು ಚುನಾವಣಾಧಿಕಾರಿಗಳಿಗೆ ಈ ಮೂಲಕ ಅನುಮತಿ ನೀಡಲಾಗಿದೆ." ಎಂದು ತಿಳಿಸಲಾಗಿರುತ್ತದೆ. ಅದರಂತೆ ಪರಿಶೀಲಿಸಲಾಗಿ, ಫೆಡರಲ್ ಸಹಕಾರ ಸಂಘಗಳಿಗೆ ದಿನಾಂಕ: 30-7-2016 ಮತ್ತು 31-7-2016 ಈ ಎರಡು ದಿನಾಂಕಗಳಲ್ಲಿ ಸೂಕ್ತವೆನಿಸುವ ಯಾವುದೇ ದಿನಾಂಕದಲ್ಲಿ ಚುನಾವಣೆಯನ್ನು ನಿಗದಿಪಡಿಸತಕ್ಕದ್ದೆಂದು ತಿಳಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ರವರಿಂದ ಎಲ್ಲಾ ಅಗತ್ಯ ದಾಖಲೆಗಳನ್ನು ಪಡೆದು ಪರಿಶೀಲಿಸುವಲ್ಲಿ ಉಲ್ಲೇಖ(1)ರಿಂದ (3)ರವರೆಗಿನ ಆದೇಶ ಮತ್ತು ಪತ್ರಗಳಲ್ಲಿ ನಿಗದಿಪಡಿಸಿದ ದಿನಾಂಕಗಳು ಮುಕ್ತಾಯಗೊಂಡಿರುತ್ತವೆ. ಆದ್ದರಿಂದ ಚುನಾವಣೆ ನಡೆಸಲು ನಿಯಮಾನುಸಾರ ಅಗತ್ಯವಿರುವ ಕಾಲಾವಕಾಶವನ್ನು ಗಮನದಲ್ಲಿಟ್ಟು ಕೊಂಡು ದಿನಾಂಕ:27-11-2016ರಂದು ಚುನಾವಣಾ ದಿನಾಂಕವನ್ನು ನಿಗದಿಪಡಿಸಿ, ಉಲ್ಲೇಖ(4)ರನ್ವಯ 45 ದಿನಗಳ ಪೂರ್ವದಲ್ಲಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಸಲಾಗಿರುತ್ತದೆ.

ಕಾರ್ಯದರ್ಶಿ, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರುರವರ ಉಲ್ಲೇಖ(5)ರ ಪತ್ರದನ್ವಯ ಮೇಲ್ಕಂಡ ದಿನಾಂಕದಂದು ಚುನಾವಣೆ ನಡೆಸುವ ಬಗ್ಗೆ ಅನುಮತಿ ನೀಡಲಾಗಿದೆ. ಹಾಗೂ ಉಲ್ಲೇಖ(6)ರ ಪತ್ರದನ್ವಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ರವರಿಗೆ ಈಗಾಗಲೇ ಡೆಲಿಗೇಟ್ಸ್ ನಮೂನೆಗಳನ್ನು ನೀಡಲಾಗಿರುತ್ತದೆ.

ಉಲ್ಲೇಖ(4)ರ ದಿನಾಂಕ:7-10-2016ರ ಅಧಿಕೃತ ಜ್ಞಾಪನದಲ್ಲಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಿ 30 ದಿನಗಳ ಕಾಲಾವಕಾಶ ನೀಡಲಾಗಿದ್ದು, ಸದರಿ

M

ಕಾಲಾವಧಿಯು ದಿನಾಂಕ:5-11-2016ಕ್ಕೆ ಮುಕ್ತಾಯಗೊಳ್ಳಲಿರುತ್ತದೆ. ಚುನಾವಣಾ ದಿನಾಂಕಕ್ಕೆ ಸ್ಪಷ್ಟ 15 ದಿನಗಳ ಮುಂಚೆ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಬೇಕಾಗಿರುತ್ತದೆ.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಪ್ರಕರಣ ಸಂಖ್ಯೆ 26ಎ ರಲ್ಲಿ ಈ ಕೆಳಕಂಡಂತೆ ಹೇಳಲಾಗಿದೆ.

"26ಎ,-ಸಹಕಾರ ಚುನಾವಣಾ ಆಯೋಗ- ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ 39ಎಎ ಪ್ರಕರಣದ ಅಡಿಯಲ್ಲಿ ರಚಿಸಲ್ಪಟ್ಟಿರುವ ಚುನಾವಣಾ ಆಯೋಗವು ಈ ಅಧಿನಿಯಮದ ಅಡಿಯಲ್ಲಿ ಚುನಾವಣೆಗಳನ್ನು ನಡೆಸಲೂ ಸಹ ಚುನಾವಣಾ ಆಯೋಗವಾಗಿರತಕ್ಕದ್ದು. ಮತ್ತು ಈ ಅಧಿನಿಯಮದಡಿಯಲ್ಲಿ ಸಂಯುಕ್ತ ಸಹಕಾರಿಯೂ ಸೇರಿದಂತೆ ಸಹಕಾರಿಗಳಿಗೆ ಸಂಬಂಧಿಸಿದಂತೆ ಸದರಿ ಅಧಿನಿಯಮದ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅದೇ ರೀತಿಯ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು."

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ 13-ಡಿ(4)ರಲ್ಲಿ ಈ ಕೆಳಕಂಡಂತೆ ಹೇಳಲಾಗಿದೆ.

"(4) It shall be the duty of every society to furnish correct information required by the District Election Officer to enable him to prepare the electoral rolls, as directed by the Co-operative Election Commission or the District Election Officer from time to time."

ಅದರಂತೆ ಉಲ್ಲೇಖ(7)ರನ್ವಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ರವರಿಗೆ ಬರೆದಿರುವ ಈ ಕಛೇರಿಯ ಪತ್ರದಲ್ಲಿ "ಕ್ರಮಬದ್ಧವಾಗಿರುವ ಡೆಲಿಗೇಟ್ಸ್ ನಮೂನೆಗಳ ಮೇಲೆ ಪರಿಶೀಲನಾಧಿಕಾರಿಗಳ ದೃಢೀಕರಣ ಪಡೆಯುವುದು. ಡೆಲಿಗೇಟ್ಸ್ ನಮೂನೆಗಳ ಜೊತೆ ಸದಸ್ಯ ಸಹಕಾರಿಗಳಲ್ಲಿ ಡೆಲಿಗೇಟ್ ಆಯ್ಕೆ ಬಗ್ಗೆ ನಡೆಸಿರುವ ನಡವಳಿಯ ದೃಢೀಕೃತ ಪ್ರತಿ ಮತ್ತು ನಡವಳಿಯ ಮೂಲ ವಹಿಯನ್ನು ಪರಿಶೀಲನೆಗಾಗಿ ಈ ಕಛೇರಿಗೆ ಹಾಜರುಪಡಿಸಲು" ಕೋರಲಾಗಿತ್ತು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಗಳು ಈ ಕಛೇರಿಗೆ ಈಗ ಸಲ್ಲಿಸಿರುವ ಮನವಿಗಳಲ್ಲಿ ಮೂಲ ನಡವಳಿ ಪುಸ್ತಕವನ್ನು ಖುದ್ದಾಗಿ ಹಾಜರುಪಡಿಸಲು ಕಷ್ಟಸಾಧ್ಯವಾಗಿರುತ್ತದೆಂದು ತಿಳಿಸಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರುರವರು ಉಲ್ಲೇಖ(8)ರನ್ವಯ ಈ ಕಛೇರಿಗೆ ಬರೆದಿರುವ ಪತ್ರದೊಂದಿಗೆ ಸದಸ್ಯ ಸಹಕಾರಿಗಳಿಗೆ ಕಳುಹಿಸಿರುವ ಪತ್ರಗಳ ಪ್ರತಿಯನ್ನು ಲಗತ್ತಿಸಿ ಕಳುಹಿಸಿದ್ದು, ಈ ಬಗ್ಗೆ ಪರಿಶೀಲಿಸಲಾಗಿ, ಸದರಿಯವರು ಪತ್ರ ಸಂಖ್ಯೆ: ಸಂಸ/ಆಡಳಿತ/ಚುನಾವಣೆ/26/2016-17 ದಿನಾಂಕ: 28-10-2016ರಂತೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಗಳ ಅಧ್ಯಕ್ಷರು/ ಮುಖ್ಯ ಕಾರ್ಯ ನಿರ್ವಾಹಕರಿಗೆ ಬರೆದಿರುವ ಪತ್ರದಲ್ಲಿ " ಮಾನ್ಯ ಪ್ರಾದೇಶಿಕ

ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಇವರು ಉಲ್ಲೇಖದ ಪತ್ರವನ್ನು ಬರೆದು ಸದಸ್ಯ ಸಹಕಾರಿಗಳಲ್ಲಿ ಡೆಲಿಗೇಟ್ ಆಯ್ಕೆ ಬಗ್ಗೆ ನಡೆಸಿರುವ ಆಡಳಿತ ಮಂಡಲಿ ಸಭೆಯ ನಡವಳಿಗಳ ದೃಢೀಕೃತ ಪ್ರತಿ ಮತ್ತು ನಡವಳಿಯ ಮೂಲ ವಹಿಯನ್ನು ಪರಿಶೀಲನೆಗಾಗಿ ತಮ್ಮ ಕಛೇರಿಗೆ ಹಾಜರುಪಡಿಸಲು ತಿಳಿಸಿರುತ್ತಾರೆ. ಈ ಕುರಿತು ಅನೇಕ ಬಾರಿ ಮಾನ್ಯ ಚುನಾವಣಾಧಿಕಾರಿಗಳೊಂದಿಗೆ ಮೌಖಿಕವಾಗಿ ಚರ್ಚಿಸಿ, ಸದರಿ ಕಾರ್ಯವು ಪ್ರಾಯೋಗಿಕವಾಗಿ ಕಷ್ಟಸಾಧ್ಯ ಹಾಗೂ ಸಹಕಾರಿಗಳಿಗೆ ಆರ್ಥಿಕ ಹೊರೆಯಾಗುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಡಲು ಪ್ರಯತ್ನಿಸಲಾಗಿದೆ." ಎಂದು ತಿಳಿಸಿರುತ್ತಾರೆ. ಆದರೆ ಈವರೆವಿಗೂ ಸಹಾ ಈ ಕಛೇರಿಗೆ ಅಂತಿಮ ಮತದಾರರ ಪಟ್ಟಿಯನ್ನಾಗಲೀ, ಡೆಲಿಗೇಟ್ಸ್ ನಮೂನೆಗಳನ್ನಾಗಲೀ, ಮೂಲ ನಡವಳಿ ವಹಿಗಳನ್ನಾಗಲೀ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಚುನಾವಣೆಗೆ ಸಂಬಂಧಿಸಿದಂತೆ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಗಳಲ್ಲಿ ಡೆಲಿಗೇಟ್ಸ್ ಆಯ್ಕೆಯ ಕುರಿತು ನಡೆಸಿರುವ ಸಭೆಯ ನಡವಳಿಯನ್ನು ಹಾಜರಾತಿ ಸಹಿತ ಪೂರ್ಣ ಸಭಾ ನಡವಳಿಯ ಫೋಟೋ ಪ್ರತಿಯ ಪ್ರತಿಯೊಂದು ಪುಟವನ್ನು ಸಹ ದೃಢೀಕರಿಸಿ ಕಳುಹಿಸಲು ಕೋರಿದೆ. ಇದಕ್ಕೆ ಸಂಬಂಧಪಟ್ಟಂತೆ ಉಲ್ಲೇಖ(4)ರನ್ವಯ ಈ ಕಛೇರಿಯಿಂದ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿರುವ ಅಧಿಕೃತ ಜ್ಞಾಪನದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ.

ತಮ್ಮ ವಿಶ್ವಾಸಿ,

Jayanthi

ಪ್ರಾದೇಶಿಕ ಆಯುಕ್ತರು,
ಬೆಂಗಳೂರು ವಿಭಾಗ,
ಬೆಂಗಳೂರು.

**<u>ಪ್ರತಿಯನ್ನು:-</u>**

(1) ಆಯುಕ್ತರು, ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಪ್ರಾಧಿಕಾರ, 3ನೇ ಮಹಡಿ, 'ಎ' ಬ್ಲಾಕ್, ಬಿ.ಎಂ.ಟಿ.ಸಿ. ಕಟ್ಟಡ, ಶಾಂತಿನಗರ, ಬೆಂಗಳೂರು-27 ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

(2) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ರವರಿಗೆ ಕಳುಹಿಸುತ್ತಾ, ಮೇಲ್ಕಂಡಂತೆ ಸಭಾ ನಡವಳಿಯ ಫೋಟೋ ಪ್ರತಿಯನ್ನು ಆಯಾ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರುಗಳಿಂದ ದೃಢೀಕರಿಸಿ ಸಲ್ಲಿಸಲು ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಿದೆ.